ಆಗಿ ಉಳಿದಿರುವ ಬಹಳಷ್ಟು ಮಂದಿಯ ಕತೆ ಕೂಡ. ಇದು ಯಾವುದೇ ಒಂದು ದೇಶಕ್ಕೆ ಸೀಮಿತವಾದ, ಯಾವುದೇ ಒಂದು ದೇಶಕ್ಕೆ ಹೊರಗಿನಿಂದ ಬಂದ ಮಂದಿಗೆ ಸೀಮಿತವಾದ ಅಥವಾ ಈ ದೇಶದಿಂದ ಹೊರಗೆ ನೆಲೆಯರಸಿ ಹೋದ ಮಂದಿಗೆ ಸೀಮಿತವಾದ ಕತೆಯಲ್ಲ. ನಾವು ಇದ್ದಲ್ಲೇ ನಮಗೆ ಹೊರಗಿನವರಾಗಿ ಬಿಟ್ಟಂತಿರುವ ದೇಶ–ಕಾಲದ ಕತೆ.

ಹೊಟ್ಟೆಪಾಡಿಗಾಗಿ ಇಡೀ ಜಗತ್ತಿನಾದ್ಯಂತ ಲಭ್ಯವಿರುವ ಯಾವತ್ತೂ ಅವಕಾಶಗಳನ್ನು ಬಳಸಿಕೊಳ್ಳಲು ಅವನು ತನ್ನ ಬಾಹುಗಳನ್ನು ಚಾಚಿ ವಾಮನ ತ್ರಿವಿಕ್ರಮನಾಗಲು ಹವಣಿಸಿದ್ದು ಇಂದು ನಿನ್ನೆಯ ಬೆಳವಣಿಗೆಯೇನಲ್ಲ. ಸಹಜವಾಗಿಯೇ ಇದಕ್ಕೆ ಹತ್ತು ಹಲವು ಮುಖಗಳಿರುವುದು ಸಾಧ್ಯ. ಪ್ರತಿಭೆ, ಅವಕಾಶ, ಯಶಸ್ಸು ಮತ್ತು ಮನೋಧರ್ಮ ಈ ನಾಲ್ಕರ ನಡುವೆ ಒಂದು ಅನುಪಾತವಿದೆಯೆ? ಇದೆ ಎಂದು ನಂಬುವುದಾದರೆ ನಾವು ಜಗತ್ತಿನ ಅಸಮಾನತೆಯ ಪ್ರಶ್ನೆಯನ್ನು ಎದುರಿಸಬೇಕಾದ ನೆಲೆ ಯಾವುದು? ಹಾಗೆಯೇ, ಸಮಾನತೆಯನ್ನು ಬಯಸುವವರು ನೆಲೆಗೊಳಿಸಬೇಕೆಂದಿರುವ ಸಮಾನತೆಯ ವಾಸ್ತವವಾದಿ ಪರಿಕಲ್ಪನೆ ಏನು? ಇವರ ಪ್ರಕಾರ ಸಮಾನತೆ ಯಾವಾಗ ನೆಲೆಗೊಳ್ಳುತ್ತದೆ?

ಕಾದಂಬರಿಯ ಮೊದಲ ಸ್ತರದಲ್ಲಿ ಕರ್ಕಿ ಕೃಷ್ಣಮೂರ್ತಿಯವರು ಕಟ್ಟುವ ನಾಯಕನ ಪಾತ್ರವೇನಿದೆ ಅದರ ವೈಶಿಷ್ಟ್ಯವೇ ಪ್ರಧಾನವಾಗಿದೆ. ಈ ನಿರಂಜನ ಒಬ್ಬ ವಿವಾಹಿತ ಮಹತ್ವಾಕಾಂಕ್ಷಿ. ಅವನು ಕಷ್ಟಪಟ್ಟು ಕಲಿತವನಲ್ಲ, ಆದರೆ ಅವನಲ್ಲಿ ಕೌಶಲವಿದೆ, ಪ್ರತಿಭೆ ಎನ್ನಲಾಗದ ಕಾರಕೂನಿ ಜಾಣತನ ಇದೆ. ವಿಪರೀತ ಸೆಲ್ಫ್ ಸೆಂಟರ್ಡ್ ತರ ಕಾಣಿಸುವ ಅವನಲ್ಲಿ ಸಹಜೀವಿಯ ನೋವು, ಸಂಕಟದ ಬಗ್ಗೆ ನಾಗರಿಕ ನಿರ್ಲಿಪ್ತಿಯಿದೆ. ಅವನಲ್ಲೂ ಎದುರಾಗುವ ಅವಕಾಶಗಳನ್ನು ತತ್‌ಕ್ಷಣ ಗುರುತಿಸಬಲ್ಲ ಮತ್ತು ಅದನ್ನು ಪೂರ್ತಿಯಾಗಿ ಬಳಸಿಕೊಂಡು ಬೆಳೆಯಲು ಬೇಕಾದ ತಂತ್ರ ಹೆಣೆಯಬಲ್ಲ ಚಿಂತಕನೊಬ್ಬನಿದ್ದಾನೆ. ತನ್ನ ಸ್ವಂತದ ಖುಷಿ, ಮನರಂಜನೆ ಮತ್ತು ತೃಪ್ತಿಗೆ ತನಗೆ ಬೇಕಾದ ನೆಲೆಯಿಂದ ಸಹಜೀವಿಯ ನೋವು, ಅವಮಾನ, ಸೋಲುಗಳನ್ನು ಕೂಡ ಬಳಸಿಕೊಳ್ಳಬಲ್ಲ, ಸ್ವತಃ ಅದೇ ಆಗಿರುವವರಿಗೂ ಮೇಲ್ನೋಟಕ್ಕೆ ಸ್ಯಾಡಿಸ್ಟ್ ಅನಿಸಬಹುದಾದ, ಸಹಜಸಿದ್ಧ ಆಧುನಿಕ ಮನೋಧರ್ಮವಿದೆ. ದಿನನಿತ್ಯ ಮಾಧ್ಯಮಗಳಲ್ಲಿ ದುರಂತಗಳನ್ನು, ಸಾವು ನೋವನ್ನು, ದುರ್ಘಟನೆಗಳನ್ನು ನಿರ್ಲಿಪ್ತಿಯಿಂದಲೂ, ಅಷ್ಟಿಷ್ಟು ಮನರಂಜಕ ನೆಲೆಯಿಂದಲೂ ಗಮನಿಸಿಕೊಳ್ಳುವ, ಸೋಶಿಯಲ್ ಮೀಡಿಯಾಗಳಲ್ಲಿ ಚರ್ಚಿಸಲು ಯಾವುದು ಹೆಚ್ಚು ಯೋಗ್ಯ ಎಂಬುದರಾಚೆ ತಲೆಕೆಡಿಸಿಕೊಳ್ಳದ ಯಾರೂ ಈ ನಾಯಕನನ್ನು ಕೀಳಾಗಿ ಕಾಣಬೇಕಾದ್ದಿಲ್ಲ. ಅವನೊಳಗೊಬ್ಬ ದೇಶ, ಭಾಷೆ, ಬಣ್ಣ, ಧರ್ಮ ಮುಂತಾದುವುಗಳನ್ನು ಜಾಣತನದಿಂದ ಬಳಸಿಕೊಳ್ಳಬಲ್ಲ ಅಪ್‌ಟುಡೇಟ್ ದೇಶಪ್ರೇಮಿಯಿದ್ದಾನೆ. ಅವನಿಗೆ ವಿದೇಶೀ ನೌಕರಿ ಹಿಡಿದು, ವಿದೇಶದಲ್ಲಿ ಸೆಟ್ಲ್ ಆಗಿ ಹೈಕ್ಲಾಸ್ ಎನ್ನುತ್ತೇವಲ್ಲ, ಆ ತರ ಬದುಕಬೇಕೆಂಬ ಕನಸಿದೆ. ಇಂಥ ಒಬ್ಬ ನಾಯಕ, ನಿರಂಜನ ಈ ಕಾದಂಬರಿಯ ಕೇಂದ್ರ ಪಾತ್ರ. ಇದು ಒಂದು ವ್ಯವಸ್ಥೆಯ ಬಳುವಳಿ ಎನ್ನುವುದನ್ನು ಮರೆಯದೇ ಸ್ವೀಕರಿಸುವುದು ಉಚಿತ.

ಇಂಥ ನಾಯಕನನ್ನಿಟ್ಟುಕೊಂಡು ಹೊರಟ ಕಾದಂಬರಿಯ ಕಾರ್ಯಕ್ಷೇತ್ರ ಮಲೇಷ್ಯಾ. ಅವನು ವಾಸ್ತವ್ಯ ಹೂಡುವ ಮನೆಯ ಮಾಲೀಕ ಕಣ್ಣದಾಸನ್, ಅವನ ಪತ್ನಿ ರೇವತಿ, ಅವರ ಬದುಕಿನ ಒಂದು ಪುಟ್ಟ ಹಿನ್ನೋಟ, ಅವನು ಓಡಾಡಲು ಬಳಸುವ ಟ್ಯಾಕ್ಸಿಯ ಡ್ರೈವರ್ ದೊರೈ, ಅವನ ಪುಟ್ಟ ಹಿನ್ನೆಲೆ, ದೊರೈಯಿಂದಾಗಿಯೇ ಪರಿಚಯವಾಗುವ ಜೋಮೋ, ಈ ಯಾವತ್ತೂ ವ್ಯಕ್ತಿಗಳೊಂದಿಗಿನ ಒಡನಾಟದಲ್ಲೇ ತೆರೆದುಕೊಳ್ಳುವ ನಿರಂಜನನ ಪಿಸುಣತನ, ಕುಸುಡುತನದ ವ್ಯಕ್ತಿತ್ವ – ಇವೆಲ್ಲ ಈ ಕಾದಂಬರಿಯನ್ನು ಸಮೃದ್ಧವಾಗಿಸುತ್ತ ಹೋಗುತ್ತವೆ. ಸ್ವತಃ ನಿರಂಜನ,